# ಗ್ರಹಿಕಾ ತಂತ್ರಗಳ ಕಲಿಕೆ, ಭಾಗ II : ಥಿಂಕ್ ಅಲೌಡ್ ನಡೆಸುವುದು

Early Literacy Initiative

Tata Institute of Social Sciences, Hyderabad

Practitioner Brief (15)

2019

Supported by

TATA TRUSTS

This Practitioner Brief is part of a series brought out by the Early Literacy Initiative anchored by the Azim Premji School of Education at the Tata Institute of Social Sciences, Hyderabad

TEACHING COMPREHENSION STRATEGIES, PART II: CONDUCTING A THINK ALOUD

# ಗ್ರಹಿಕಾ ತಂತ್ರಗಳ ಕಲಿಕೆ,ಭಾಗ II:ಥಿಂಕ್ ಅಲೌಡ್ ನಡೆಸುವುದು



**ಗ್ರಹಿಕಾ ತಂತ್ರಗಳ ಬೋಧನೆಗೆ ಸಂಬಂಧಿಸಿದಂತೆ ಇಎಲ್ಐ ಎರಡು ಅಭ್ಯಾಸಿಗಳ ಟಿಪ್ಪಣಿಗಳನ್ನು ಒಟ್ಟಿಗೆ ನೀಡಿದೆ. ಭಾಗ *I* , ಪರಿಚಯ ಮತ್ತು ಅವಲೋಕನದ ಬಗ್ಗೆ ತಿಳಿಸುತ್ತದೆ . ಪ್ರಸ್ತುತ ಸಂಕ್ಷಿಪ್ತಟಿಪ್ಪಣಿಯು ಭಾಗ *II* ಆಗಿದೆ .ಮಕ್ಕಳಿಗೆ** ಗ್ರಹಿಕಾ ತಂತ್ರಗಳ ಬೋಧನೆಯ **ಪ್ರಾಮುಖ್ಯವನ್ನು ತ್ವರಿತವಾಗಿ ಪುನರಾವರ್ತಿಸಿದ ನಂತರ, ನಿರ್ದಿಷ್ಟವಾಗಿ, ಥಿಂಕ್ ಅಲೌಡ್ಸ್ ಗಳನ್ನು ಹೇಗೆ ನಡೆಸುವುದು ಎಂಬುದರ ಬಗ್ಗೆ ಇದು ಚರ್ಚಿಸುತ್ತದೆ**

.

ನಿಮ್ಮ ಶಾಲಾ ದಿನಗಳಿಗೆ ಹಿಂದುರುಗಿ ಒಮ್ಮೆ ಯೋಚಿಸಿ :ನೀವು ಓದಿದ್ದನ್ನು ಹೇಗೆ ಅರ್ಥೈಸಿಕೊಳ್ಳಬೇಕೆಂದು ನಿಮ್ಮ ಶಿಕ್ಷಕರು ನಿಮಗೆ ತೋರಿಸಿದ್ದಾರೆಯೇ? ಹೆಚ್ಚಿನ ಜನರ ಉತ್ತರ“ ಇಲ್ಲ .” ಎಂದಿರುತ್ತದೆ.

ಪಠ್ಯವನ್ನು ಓದಿದ ನಂತರ, ನಿಮ್ಮ ಶಿಕ್ಷಕರು ಇದರ ಅರ್ಥವೇನು ಎಂದು ನಿಮ್ಮನ್ನು ಕೇಳಿರಬಹುದು ಮತ್ತು ನಿಮ್ಮ ಪ್ರತಿಕ್ರಿಯೆ ಸರಿ ಅಥವಾ ತಪ್ಪು ಎಂದು ನಿಮಗೆ ಅವರು ಹೇಳಿರಬಹುದು . ಅವರು ಓದಿದ್ದನ್ನು ಅರ್ಥಮಾಡಿಕೊಳ್ಳದ ವಿದ್ಯಾರ್ಥಿಗಳಿಗೆ“ಹಿಂದುಳಿದ ಓದುಗರು ”ಎಂದು ಬೆರಳು ಮಾಡಿ ತೋರಿರಬಹುದು ಮತ್ತು“ ಮತ್ತೆ ಓದಲು ”ಅಥವಾ“ ಓದಿನ ಕಡೆಗೆ ಹೆಚ್ಚು ಗಮನ ಕೊಡಿ ”ಎಂದು ಹೇಳಿರಬಹುದು .ಅಥವಾ ಓದಿದ ವಿದ್ಯಾರ್ಥಿಗಳು ಆ ತಿಳುವಳಿಕೆಗೆ ಹೇಗೆ ತಲುಪಿದರು ಎಂಬುದನ್ನು ಹೇಳದೆ ,ಪಠ್ಯದ ಅರ್ಥವನ್ನು ಸರಳವಾಗಿ ವಿವರಿಸಿರಬಹುದು .

ನಿಮ್ಮ ಶಾಲಾ ದಿನಗಳ ಕಾಲದಿಂದ ಇಲ್ಲಿಯವರೆಗು ಹೆಚ್ಚು ಏನು ಬದಲಾಗಿಲ್ಲ - ಇಂದಿಗೂ ಹೆಚ್ಚಿನ ಭಾರತೀಯ ತರಗತಗಳಲ್ಲಿ ಇದೇ ರೀತಿಯ ಅಭ್ಯಾಸಗಳು ಚಾಲ್ತಿಯಲ್ಲಿವೆ ಎಂದು ತೋರುತ್ತದೆ. (ಮೆನನ್

ಮತ್ತು ಇತರರು, 2017, ಸಾಹ್, 2009, ಸಿನ್ಹಾ, 2018 ರಲ್ಲಿ ಉಲ್ಲೇಖಿಸಿದಂತೆ) .ಈ ವಿಧಾನಗಳನ್ನು ಶಿಕ್ಷಕರು ಉತ್ತಮ ಉದ್ದೇಶದಿಂದ ಬಳಸುತ್ತಿದ್ದರೂ, ಇವುಗಳಿಂದ ವಿದ್ಯಾರ್ಥಿಗಳ ಗ್ರಹಿಕೆಗೆ ಹೆಚ್ಚಿನ ಪ್ರಯೋಜನವಾಗುತ್ತಿಲ್ಲ. ಹೆಚ್ಚೆಂದರೆ ವಿದ್ಯಾರ್ಥಿಗಳು ಚರ್ಚಿಸಲಾದ ನಿರ್ದಿಷ್ಟ ಪಠ್ಯವನ್ನು ಅರ್ಥಮಾಡಿಕೊಳ್ಳಬಹುದು .ಆದರೆ" ಹೇಗೆ-ಏನು " ಎಂದು ಕಲಿಸದಿದ್ದ ಮೇಲೆ )

---

[1] Access **Part I** of this series, Teaching Comprehension Strategies, Part I: Introduction and Overview at http://eli.tiss.edu/handouts-publications/ Illustration at the top by James Yang in American Educator's Spring 2012 issue. Retrieved from: https://www.aft.org/sites/default/files/periodicals/Rosenshine.pdf

, ಈ ಅಭ್ಯಾಸಗಳು ವಿದ್ಯಾರ್ಥಿಗಳಿಗೆ ಹೊಸ ಪಠ್ಯಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವುದಿಲ್ಲ .ಇನ್ನೂ ಕೆಟ್ಟದಾದ ಪರಿಸ್ಥಿತಿಯೆಂದರೆ ವಿದ್ಯಾರ್ಥಿಗಳು ನಿಷ್ಕ್ರಿಯರಾಗಬಹುದು, ಅರ್ಥ ಮಾಡಿಕೊಳ್ಳಲು ಶಿಕ್ಷಕರ ಮೇಲೆ ಸಂಪೂರ್ಣವಾಗಿ ಅವಲಂಬಿತರಾಗಬಹುದು) ಸಿನ್ಹಾ, 2018).

ಇಲ್ಲಿ "ಹೇಗೆ-ಏನು" ಎಂದರೇನು? ಈ ಕುರಿತು ಯುನೈಟೆಡ್ ಸ್ಟೇಟ್ಸ್ (ಅಮೇರಿಕ) ಸಂಶೋಧನೆ ನಡೆಸಿದೆ. ಅವರ ಸಂಶೋಧನೆಯ ಪ್ರಕಾರ ಪಠ್ಯಗಳನ್ನು ಚೆನ್ನಾಗಿ ಗ್ರಹಿಸಬಲ್ಲವರು ("ಉತ್ತಮ ಓದುಗರು") ಓದುವಾಗ ಅರ್ಥವನ್ನು ಸಕ್ರಿಯವಾಗಿ ನಿರ್ಮಿಸಿಕೊಳ್ಳಲು ಹಲವಾರು ತಂತ್ರಗಳನ್ನು ಬಳಸುತ್ತಾರೆ (ಪ್ರೆಸ್ಲೆ, 2001). ಉದಾಹರಣೆಗೆ, ಅವರು ಒಂದು ಗುರಿ ಇಟ್ಟುಕೊಂಡು ಪಠ್ಯವನ್ನು ಓದುತ್ತಾರೆ, ಪಠ್ಯವನ್ನು ಓದುವ ಮೊದಲು ಪೂರ್ವವೀಕ್ಷಣೆ ಮಾಡುತ್ತಾರೆ, ಮುಂಬರುವ ಪಠ್ಯದ ಬಗ್ಗೆ ಮುಂದಾಲೋಚನೆ ಮಾಡುತ್ತಾರೆ, ಪಠ್ಯದಲ್ಲಿನ ಹೊಸ ಮಾಹಿತಿಯನ್ನು ಅವರು ಈಗಾಗಲೇ ತಿಳಿದಿರುವ ಸಂಗತಿಗಳೊಂದಿಗೆ ಸಂಯೋಜಿಸುತ್ತಾರೆ ಹೀಗೆ ಹತ್ತು ಹಲವು ರೀತಿಗಳಲ್ಲಿ ಪಠ್ಯವನ್ನು ಅನುಸಂಧಾನ ಮಾಡುತ್ತಾರೆ. ಇನ್ನು ಕಿರಿಯ ಅಥವಾ ಕಡಿಮೆ ನುರಿತ ಓದುಗರು ಈ ತಂತ್ರಗಳನ್ನು ಬಳಕೆ ಮಾಡುವುದಿಲ್ಲ ಅಥವಾ ಬಳಸಿದರೂ ನಿರಂತರವಾಗಿ ಬಳಸುವುದಿಲ್ಲ. ಆದ್ದರಿಂದ, ಅವರು ಪಠ್ಯಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ

ಅದೃಷ್ಟವಶಾತ್, ಗ್ರಹಿಕೆಯ ತಂತ್ರಗಳನ್ನು ಕಲಿಸಬಹುದು ಎಂದು ಸಂಶೋಧನೆಯು ತೋರಿಸಿದೆ .ಅಂತಹ ಕಲಿಸುವಿಕೆಲ್ಲಿ, ಶಿಕ್ಷಕರು ವಿದ್ಯಾರ್ಥಿಗಳಿಗೆ ಪಠ್ಯವನ್ನು ವಿವರಿಸುವುದೇ ಇಲ್ಲ ಮತ್ತು ಪಠ್ಯವನ್ನು ಅರ್ಥಮಾಡಿಕೊಳ್ಳುವ ಮಾರ್ಗಗಳನ್ನು ತೋರಿಸುತ್ತಾರೆ ಅಷ್ಟೇ. ಇದು ದೀರ್ಘಾವಧಿಯಲ್ಲಿ ಪಠ್ಯಗಳನ್ನು ವಿವರಿಸುವುದಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿದೆ . ಅರ್ಥ ಗ್ರಹಿಸುವುದರಲ್ಲಿ ಸ್ವಾಭಾವಿಕವಾಗಿ ಜಾಣರಲ್ಲದ ಮಕ್ಕಳೂ ಸಹನಾವು ಗ್ರಹಿಸುವುದು ಹೇಗೆ ಎಂದು ತೋರಿಸಿಕೊಡುತ್ತಿರುವವರೆಗೂ ಅರ್ಥವನ್ನು ಗ್ರಹಿಸುವುದನ್ನು ಕಲಿಯುತ್ತಿರುತ್ತಾರೆ .




ಚಿತ್ರ ೧: ಗ್ರಹಿಕೆಯನ್ನು ಕಲಿಸಲು ಗ್ರಾಜುಯಲ್ ರಿಲೀಸ್ ಆಫ್ ರೆಸ್ಪಾನ್ಸಿಬಿಲಿಟಿ (ಜಿ ಆರ್ ಆರ್) (

ಈ ಸರಣಿಯ **ಭಾಗ I ರಲ್ಲಿ** ವಿವರಿಸಿದಂತೆ ಕಂಪ್ರೆಹೆನ್ಶನ್)ಗ್ರಹಿಕೆ (ಕಲಿಸಲು *ನೀವು ಗ್ರಾಜುಯಲ್ ರಿಲೀಸ್ ಆಫ್ ರೆಸ್ಪಾನ್ಸಿಬಿಲಿಟಿ ಮಾಡೆಲ್) ಜಿ ಆರ್ ಆರ್(*ಮಾದರಿಯನ್ನು ಬಳಸಬೇಕೆಂದು ನಾವು ಬಲವಾಗಿ ಶಿಫಾರಸ್ಸು ಮಾಡುತ್ತೇವೆ. ವ)ಚಿತ್ರ 1 ನೋಡಿ .( ಒಂದು ನಿರ್ದಿಷ್ಟ ಗ್ರಹಿಕಾ ತಂತ್ರವನ್ನುಹೇಗೆ ಬಳಸುವುದು ಎಂಬುದನ್ನು ಸ್ಪಷ್ಟವಾಗಿ ವಿವರಿಸುವ ಮತ್ತು ಮಾದರಿಯನ್ನು ತೋರಿಸುವ ಮೂಲಕ ಪ್ರಾರಂಭಿಸಿ .ನಂತರ, ನಿಮ್ಮ ವಿದ್ಯಾರ್ಥಿಗಳಿಗೆ ವಿವಿಧ ರೀತಿಗಳಲ್ಲಿ, ಅನೇಕ ಸಂದರ್ಭಗಳಲ್ಲಿ ಆ ತಂತ್ರವನ್ನು ಹೇಗೆ ಬಳಸುವುದು ಎಂಬುದರ ಕುರಿತು ಮಾರ್ಗದರ್ಶನ ನೀಡಿ. (ಸಹಕಾರಿ ಮತ್ತು ಮಾರ್ಗದರ್ಶಿ ಅಭ್ಯಾಸಗಳು). ಆಗ ಮಾತ್ರ ಅವರು ಕಲಿತ ತಂತ್ರವನ್ನು ತಾವೇ ಸ್ವತಃ ಬಳಸುವುದನ್ನು ನೀವು ನಿರೀಕ್ಷಿಸಬಹುದು .ಈ ಮಾದರಿಯು ವಿದ್ಯಾರ್ಥಿಗಳಿಗೆ ಸಹಾಯವಾಗುವ ಒಂದು ಮಾರ್ಗವಾಗಿದೆ, ಬೋಧಕರು ಕ್ರಮೇಣ ವಿದ್ಯಾರ್ಥಿಗಳಿಗೆ ತಂತ್ರಗಳನ್ನು ಬಳಸುವ ಜವಾಬ್ದಾರಿಯನ್ನುವಹಿಸು ತ್ತಾರೆ .

*ಇದರಲ್ಲಿ , ನಾವು ಜಿ ಆರ್ ಆರ್ ಮಾದರಿಯ ಮೊದಲ ಹಂತವನ್ನು ವಿಸ್ತಾರವಾಗಿ ಹೇಳುತ್ತೇವೆ.* ಅರ್ಥವನ್ನು ರೂಪಿಸಿಕೊಳ್ಳುವ ನಿಮ್ಮ ಪ್ರಕ್ರಿಯೆ ವಿದ್ಯಾರ್ಥಿಗಳಿಗೆ ಸ್ಪಷ್ಟವಾಗುವ ಹಾಗೆ ಗ್ರಹಿಕಾ ತಂತ್ರದ ಮಾದರಿ ರೂಪಿಸುವ ಪ್ರಕ್ರಿಯೆಯಲ್ಲಿ ನಾವು ನಿಮ್ಮನ್ನು ಕರೆದೊಯ್ಯುತ್ತೇವೆ.

ನಾವು ಮುಂದುವರಿಯುವ ಮೊದಲು ಒಂದು ಪ್ರಮುಖ ಅಂಶವನ್ನು ತಿಳಿದುಕೊಳ್ಳೋಣ .ಮಕ್ಕಳು ಅಕ್ಷರ ಮತ್ತು ಪದಗಳನ್ನು ಓದಲು ಕಲಿತ ನಂತರವೇ ಅವರಿಗೆ ಅರ್ಥವನ್ನು ರೂಪಿಸಿಕೊಳ್ಳುವುದರ ಕಡೆಗೆ ಗಮನಹರಿಸಲು ಹೇಳಬೇಕೆಂದು ಅನೇಕ ಶಿಕ್ಷಕರು ನಂಬುತ್ತಾರೆ!

ಆದರೆ ಮಕ್ಕಳು ಸಹಜವಾಗಿಯೇ ಅರ್ಥವನ್ನು ರೂಪಿಸಿಕೊಳ್ಳಬಲ್ಲವರಾಗಿರುತ್ತಾರೆ. ನೀವು ಅವರಿಗೆ ಓದುವ ಕಥೆಗಳು ಮತ್ತು ಪುಸ್ತಕಗಳನ್ನು ಮೊದಲ ದಿನದಿಂದಲೇ ಅರ್ಥಮಾಡಿಕೊಳ್ಳಲು ನಿರಂತರವಾಗಿ ಪ್ರಯತ್ನಿಸುತ್ತಿರುತ್ತಾರೆ . ಆದ್ದರಿಂದ ನಿಮ್ಮ ವಿದ್ಯಾರ್ಥಿಗಳ ಮಟ್ಟಕ್ಕೆ ಸೂಕ್ತವಾದ ರೀತಿಯಲ್ಲಿ ಆರಂಭಿಕ ಶ್ರೇಣಿಗಳಿಂದಲೇ ಗ್ರಹಿಕೆಯತ್ತ ಗಮನಹರಿಸುವುದು ಬಹಳ ಮುಖ್ಯ.

## ಮಾಡಲಿಂಗ್ ತಂತ್ರಗಳಿಗೆ – ಥಿಂಕ್ ಅಲೌಡ್ ಉಪಯೋಗಿಸುವುದು

ಚಿತ್ರ 1 ರಲ್ಲಿ, ಶಿಕ್ಷಕರು ವಿದ್ಯಾರ್ಥಿಗಳಿಗೆ ತಂತ್ರದ ಮಾದರಿ ತೋರಿಸುವುದರೊಂದಿಗೆ ಮತ್ತು ವಿವರಿಸುವುದರೊಂದಿಗೆ ಗ್ರಹಿಕೆಯ ಪಾಠ ಪ್ರಾರಂಭವಾಗುತ್ತದೆ. ಆದರೆ, ಗ್ರಹಿಸುವಿಕೆ ಅಥವಾ ಅರ್ಥವನ್ನು ರೂಪಿಸುವಿಕೆ ನಮ್ಮ ಮೆದುಳಿನೊಳಗೆ ನಡೆಯುವ ಸಂಗತಿಯಾಗಿದೆ! ಶಿಕ್ಷಕರು ತನ್ನ ಆಲೋಚನೆಗಳನ್ನು ವಿದ್ಯಾರ್ಥಿಗಳಿಗೆ ಹೇಗೆ ವಿವರಿಸಬಹುದು? ನಾವು ನಿಮಗೆ *ಥಿಂಕ್ ಅಲೌಡ್* ನೀಡುತ್ತೇವೆ ಪರಿಕಲ್ಪನೆಯನ್ನು ಪರಿಚಯಿಸುತ್ತೇವೆ. ಇದರಪ್ರಕಾರ ಶಿಕ್ಷಕರು ತಮ್ಮ ಆಲೋಚನೆಗಳನ್ನು ಗಟ್ಟಿಯಾಗಿ (ಅಲೌಡ್) ಹೇಳುವ ಮೂಲಕ ವಿದ್ಯಾರ್ಥಿಗಳಿಗೆ ತಮ್ಮ ಆಲೋಚನೆಗಳು "ಗೋಚರಿಸುವಂತೆ" ಮಾಡಲು ಪ್ರಯತ್ನಿಸುತ್ತಾರೆ. ಓದುವಾಗ ಉತ್ತಮ ಓದುಗರು ಹೇಗೆ ಊಹೆ, ಅನುಮಾನಗಳನ್ನು ಮಾಡುತ್ತಾರೆ ಎಂಬುದನ್ನುನೀವು ನಿಮ್ಮ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದೀರಿ ಎಂದಿಟ್ಟುಕೊಳ್ಳಿ . ಪುಸ್ತಕದಲ್ಲಿ ಸೂಕ್ತವಾದ ಕಡೆಗಳಲ್ಲಿ ಓದುವುದನ್ನು ನಿಲ್ಲಿಸಿ; ಪಠ್ಯ ಅಥವಾ ಚಿತ್ರಗಳಲ್ಲಿನ ಸುಳಿವುಗಳನ್ನು ನೀವು ಹೇಗೆ ಗುರುತಿಸುತ್ತಿದ್ದೀರಿ ಮತ್ತು ಲೇಖಕರು ನೇರವಾಗಿ ಉಲ್ಲೇಖಿಸದೇ ಪರೋಕ್ಷವಾಗಿ ಸೂಚಿಸುವ, ವಿಚಾರಗಳನ್ನು ಅರ್ಥಮಾಡಿಕೊಳ್ಳಲು ಹೇಗೆ ಪ್ರಯತ್ನಿಸುತ್ತೀರಿ ಎಂಬುದರ ಕುರಿತು ನಿಮ್ಮ ಆಲೋಚನೆಗಳನ್ನು ಮಕ್ಕಳೊಂದಿಗೆ ಹಂಚಿಕೊಳ್ಳಿ .*ನೀವು ಹೇಗೆ ಯೋಚಿಸುತ್ತೀರಿ* ಎಂಬುದನ್ನು ವಿದ್ಯಾರ್ಥಿಗಳಿಗೆ *ತಿಳಿಸಿ*) ಚಿತ್ರ 2 ನೋಡಿ .(ಇದುವೆ ಥಿಂಕ್ ಅಲೌಡ್ ನ ತಿರುಳಾಗಿದೆ .


---

[2] Refer to **Part I** of this series, mentioned earlier, for descriptions and examples of key comprehension strategies.

ಈ ರೀತಿಯ ಮಾದರಿಗಳು ವಿದ್ಯಾರ್ಥಿಗಳಿಗೆ ನಿಮ್ಮ ಅದೃಶ್ಯ ಆಲೋಚನಾ ಪ್ರಕ್ರಿಯೆಯನ್ನು ಒಳಹೊಕ್ಕು ನೋಡಲು ಸಹಾಯ ಮಾಡುತ್ತದೆ .ಪ್ರಸ್ತುತ ಪಠ್ಯವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಇದು ಅವರಿಗೆ ಸಹಾಯ ಮಾಡುವುದರ ಜೊತೆಗೆ ಮತ್ತು ಅದಕ್ಕಿಂತಲೂ ಮುಖ್ಯವಾಗಿ, *ಇತರ* ಪಠ್ಯಗಳನ್ನು ಗ್ರಹಿಸಲುಸಹ ಈ ತಂತ್ರದ ಬಳಕೆ ಅವರಿಗೆ ಅನುವು ಮಾಡಿಕೊಡುತ್ತದೆ .ಇದನ್ನು ಹೇಗೆಪರಿಭಾವಿಸ ಬಹುದು ಎಂಬುದನ್ನು ನೋಡೋಣ .

## ಥಿಂಕ್ ಅಲೌಡ್ ನ ಯೋಜನೆ

ಮೊದಲಿಗೆ, ನೀವು ಗಮನಹರಿಸಲು ಬಯಸುವ ನಿರ್ದಿಷ್ಟ ಗ್ರಹಿಕಾ ತಂತ್ರವನ್ನು ಆರಿಸಿ – ಅಂದರೆ ನಿರ್ಣಯಗಳನ್ನು ಮಾಡುವುದು, ಸಂಕ್ಷಿಪ್ತಗೊಳಿಸುವುದು ಅಥವಾ ಊಹಿಸುವುದು.



***ಚಿತ್ರ*** *.2* ಥಿಂಕ್ ಅಲೌಡ್ ನಡೆಯುತ್ತಿರುವುದು) ಮೂಲ: : https://www.oxfordowl.co.uk)

ಎರಡನೆಯದಾಗಿ, ಆಯ್ಕೆಮಾಡಿದ ಥಿಂಕ್ ಅಲೌಡ್ ಕಾರ್ಯತಂತ್ರಕ್ಕೆ , ನಿಮಗೆ ಅನೇಕ ಅವಕಾಶಗಳನ್ನು ನೀಡುವಂತಹ ಪಠ್ಯವನ್ನು ಎಚ್ಚರಿಕೆಯಿಂದ ಆರಿಸಿ .ನೀವು ಯಾವೆಲ್ಲ ಜಾಗಗಳಲ್ಲಿ ಅದರ ಮಾದರಿ ರೂಪಿಸುವಿರೋ ಅಂತಹ ಜಾಗಗಳನ್ನು ಯೋಜಿಸಿಕೊಳ್ಳಿ . ನಿಸ್ಸಂಶಯವಾಗಿ ಉತ್ತಮ ಓದುಗರು ,ಅವರು ಓದುವ ಸಮಯದಲ್ಲಿ ಕೇವಲ ಒಂದು ತಂತ್ರವನ್ನು ಬಳಸುವುದಿಲ್ಲ; ಅವರು ಓದುವಾಗ ಊಹಿಸಿಕೊಳ್ಳಬಹುದು, ಸಂಕ್ಷಿಪ್ತಗೊಳಿಸಬಹುದು ಮತ್ತು ತಮ್ಮ ಬದುಕಿಗೆ ಸಂಪರ್ಕಿಕೊಳ್ಳಬಹುದು .ಆದರೆ, ಎಲ್ಲವನ್ನೂ ಒಂದೇ ಬಾರಿಗೆ ಹೇಗೆ ಮಾಡಬೇಕೆಂದು ಚಿಕ್ಕ ಮಕ್ಕಳಿಗೆ ತೋರಿಸುವುದು ಕಷ್ಟ .ಆದ್ದರಿಂದ, ಕಲಿಕೆಯ ಪ್ರಾರಂಭದ ಹಂತಗಳಲ್ಲಿ, ನಿಮ್ಮ ಒಂದು ಥಿಂಕ್-ಅಲೌಡ್ ನ ಸಮಯದಲ್ಲಿ ಕೇವಲ ಒಂದು ತಂತ್ರದ ಮಾದರಿಯನ್ನು ರೂಪಿಸುವತ್ತ ಗಮನಹರಿಸುವುದು ಉತ್ತಮ .ಇದು ಯುವ ಓದುಗರ ಪ್ರಕ್ರಿಯೆಯನ್ನು ನಿಧಾನಗೊಳಿಸುತ್ತದೆ ಮತ್ತು ಒಂದು ಸಮಯದಲ್ಲಿ ಒಂದು ಕಾರ್ಯತಂತ್ರದೊಂದಿಗೆ ತೊಡಗಿಸಿಕೊಳ್ಳಲು, ಅರ್ಥಮಾಡಿಕೊಳ್ಳಲು ಮತ್ತು ಅಭ್ಯಾಸ

ಮಾಡಲು ಅವರಿಗೆ ಸಹಾಯ ಮಾಡುತ್ತದೆ .ಅವರುತಂತ್ರದೊಂದಿಗೆ ಹೆಚ್ಚುಪಳಗಿದಂತೆ, ಹೆಚ್ಚುಪರಿಚಿತರಾದಂತೆ, ಏಕಕಾಲದಲ್ಲಿ ಅನೇಕ ತಂತ್ರಗಳನ್ನು ಬಳಸುವಂತೆ ಅವರನ್ನು ಪ್ರೋತ್ಸಾಹಿಸಿ ಮತ್ತು ಸಹಕರಿಸಿ.


ಮೂರನೆಯದಾಗಿ, ನಿಮ್ಮ ವಿದ್ಯಾರ್ಥಿಗಳಿಗೆ ಗ್ರಹಿಕೆಯ ತಂತ್ರಗಳನ್ನು ಕಲಿಸಲು ಈ ಹಂತಗಳನ್ನು ಅನುಸರಿಸಿ (ವಿಲ್ಹೆಲ್ಮ್, 2001).

1. ತಂತ್ರವು ***ಏನನ್ನು*** ಒಳಗೊಂಡಿರುತ್ತದೆ ಎಂಬುದನ್ನು ವಿವರಿಸಿ
2. ತಂತ್ರ ***ಏಕೆ*** ಮುಖ್ಯ ಎಂಬುದನ್ನು ವಿವರಿಸಿ
3. ನಿಜವಾದ ಓದಿನಲ್ಲಿ ತಂತ್ರವನ್ನು ***ಯಾವಾಗ*** ಬಳಸಬೇಕೆಂದು ವಿದ್ಯಾರ್ಥಿಗಳಿಗೆ ಹೇಳಿ, ಅಂದರೆ, ಪಠ್ಯದ ಯಾವ ಗುಣಲಕ್ಷಣ, ವೈಶಿಷ್ಟ್ಯಗಳಲ್ಲಿ ನಿರ್ದಿಷ್ಟ ತಂತ್ರವನ್ನು ಬಳಸಬಹುದೆಂದು ಓದುಗರಿಗೆ ಸಲಹೆ ನೀಡಬಹುದು.
4. ವಿದ್ಯಾರ್ಥಿಗಳು ಗಮನಿಸುತ್ತಿರುವಾಗಲೇ ಪಠ್ಯವನ್ನು ಬಳಸಿಕೊಂಡು ***ತಂತ್ರವನ್ನು ಹೇಗೆ ನಿರ್ವಹಿಸಬೇಕು*** ಎಂಬುದನ್ನು ನಿರೂಪಿಸಿ.

ನಾಲ್ಕನೆಯದಾಗಿ, ನೀವು ವಿದ್ಯಾರ್ಥಿಗಳ ಮುಂದೆ ಓದುತ್ತಿರುವ ಪಠ್ಯದ ಪ್ರತಿಗಳು ನಿಮ್ಮ ವಿದ್ಯಾರ್ಥಿಗಳಿಗೂ ಲಭ್ಯವಿರುವಂತೆ ಮಾಡಲು ಪ್ರಯತ್ನಿಸಿ, ಇದರಿಂದ ಅವರು ನಿಮ್ಮನ್ನು ಅನುಸರಿಸಲು ಸಹಾಯವಾಗುತ್ತದೆ. ಇದು ಸಾಧ್ಯವಾಗದಿದ್ದಾಗ (ನಿಮ್ಮ ಬಳಿ ಪುಸ್ತಕದ ಹೆಚ್ಚಿನ ಪ್ರತಿಗಳಿಲ್ಲದಿದ್ದಲ್ಲಿ, ಅಥವಾ ವಿದ್ಯಾರ್ಥಿಗಳಿಗೆ ಇನ್ನೂ ನಿರರ್ಗಳವಾಗಿ ಓದಲಾಗದ ಸಂದರ್ಭದಲ್ಲಿ), ನೀವು *ಪಠ್ಯವನ್ನು ಓದುವಾಗ* ಮತ್ತು *ಥಿಂಕ್ ಅಲೌಡ್* ಮಾಡುವಾಗ ವಿದ್ಯಾರ್ಥಿಗಳು ಗೊಂದಲಕ್ಕೊಳಗಾಗಬಹುದು. ಈ ಪರಿಸ್ಥಿತಿಯಲ್ಲಿ ವ್ಯತ್ಯಾಸವನ್ನು ಸ್ಪಷ್ಟವಾಗಿ ಸೂಚಿಸಲು ಯಾವುದಾದರೂ ಒಂದು ಸನ್ನೆ ಮಾಡಿ (ಬೀರ್ಸ್, 2003). ಉದಾಹರಣೆಗೆ, ನೀವು ಥಿಂಕ್ ಅಲೌಡ್ ಮಾಡುವ ಪ್ರತಿ ಸಾರಿ "ಥಿಂಕಿಂಗ್ ಹ್ಯಾಟ್" ಅನ್ನು ಹಾಕಿ, ಇದರಿಂದ ವಿದ್ಯಾರ್ಥಿಗಳು ನಿಮ್ಮ ಆಲೋಚನೆಯನ್ನು ಕೇಳಿಸಿಕೊಳ್ಳುವಂತಾಗುತ್ತದೆ. ಅಥವಾ, ಥಿಂಕ್ ಅಲೌಡ್ ಮಾಡುವಾಗ ಮೇಲ್ಛಾವಣಿಯನ್ನು ಸುಮ್ಮನೆ ನೋಡುತ್ತಿರಿ. ಆಗ ನೀವು ಆ ಸಮಯದಲ್ಲಿ ಪಠ್ಯವನ್ನು ಓದುತ್ತಿಲ್ಲ, ಯೋಚಿಸುತ್ತಿದ್ದೀರಿ ಎಂದು ಅವರಿಗೆ ತಿಳಿಯುತ್ತದೆ.

## ಥಿಂಕ್ ಅಲೌಡ್ ಗೆ ಉದಾಹರಣೆ

ಈ ವಿಭಾಗದಲ್ಲಿ, *ಕ್ಯಾಚ್ ದಟ್ ಕ್ಯಾಟ್!*[3] ಪುಸ್ತಕವನ್ನು ಬಳಸಿಕೊಂಡು ನಾವು ನಿಮಗೆ ಥಿಂಕ್ ಅಲೌಡ್ ಅನ್ನು ತೋರಿಸಿಕೊಡುತ್ತೇವೆ) ಚಿತ್ರ 3 ನೋಡಿ .(ಇಲ್ಲಿ, 3ನೇ ತರಗತಿ ವಿದ್ಯಾರ್ಥಿಗಳಿಗೆ ತಾವು *ಓದಿದ್ದನ್ನು ಅರ್ಥಮಾಡಿಕೊಳ್ಳಲು ಅನುಮಾನಗಳನ್ನು* )ಇನ್ಫರೆನ್ಸ್ (ಹೇಗೆರೂಪಿಸಿಕೊಳ್ಳ ಬೇಕು ಮತ್ತು ಬಳಸಬೇಕು ಎಂಬುದನ್ನು ಕಲಿಸುವುದು ಉದ್ದೇಶವಾಗಿದೆ.




***ಚಿತ್ರ ೩*** .ಕ್ಯಾಚ್ ದಿ ಕ್ಯಾಟ್ ಪುಸ್ತಕದ ಮುಖ ಪುಟ ಮತ್ತು ಚಿತ್ರಗಳು

ಇನ್ಫರೆನ್ಸಿಂಗ್ಅಥವಾ ಊಹಿಸುವುದು ಎಂದರೇನು? ಸರಳವಾಗಿ ಹೇಳುವುದಾದರೆ, ಏನಾಗುತ್ತದೆ ಎಂಬುದನ್ನರಿವ ಸಲುವಾಗಿ ಪಠ್ಯವನ್ನು ಮೀರಿ ಮುಂದೆ ಹೋಗಿ ಅರ್ಥವನ್ನು ಕಂಡುಕೊಳ್ಳುವ ಸಾಮರ್ಥ್ಯವನ್ನು ಇನ್ಫರೆನ್ಸಿಂಗ್ ಅಥವಾ ಊಹಿಸುವುದು ಎನ್ನುತ್ತೇವೆ . ಇದಕ್ಕಾಗಿ, ಉತ್ತಮ ಓದುಗರು ಪ್ರಪಂಚದ ಬಗ್ಗೆ ಈಗಾಗಲೇ ತಮಗೆ ತಿಳಿದಿರುವದನ್ನು ಪಠ್ಯದಲ್ಲಿ ನಡೆಯುತ್ತಿರುವುದರೊಂದಿಗೆ ಸಂಪರ್ಕ ಕಲ್ಪಿಸಿಕೊಂಡು ಕೆಲವು ಊಹೆ ಅಥವಾ ತೀರ್ಮಾನಗಳಿಗೆ ಬರಲು ಪ್ರಯತ್ನಿಸುತ್ತಾರೆ .ಉದಾಹರಣೆಗೆ, “ಬೆಕ್ಕುಗಳು ಇಲಿಗಳನ್ನು ಪಾರ್ಟಿಗೆ ಆಹ್ವಾನಿಸಿದವು ”ಎಂದು ಪಠ್ಯ ಹೇಳಬಹುದು .ನೈಜ ಜಗತ್ತಿನಲ್ಲಿ ಬೆಕ್ಕುಗಳು ಮತ್ತು ಇಲಿಗಳು ಸ್ನೇಹಿತರಲ್ಲ ಎಂದು ಉತ್ತಮ ಓದುಗರಿಗೆ ತಿಳಿದಿರುತ್ತದೆ - ಈ ಆಹ್ವಾನದ ಬಗ್ಗೆ ಅವರಿಗೆ ತಕ್ಷಣ ಅನುಮಾನ ಬರುತ್ತದೆ .ಸಣ್ಣ ವಿದ್ಯಾರ್ಥಿಗಳಿಗೆ ಸಹ ಇನ್ಫರೆನ್ಸಿಂಗ್ ಅನ್ನು ಅದರ ಸರಳ ರೂಪದಲ್ಲಿ ಪರಿಚಯಿಸಬಹುದು ಎಂದು ನಾವು ಭಾವಿಸುತ್ತೇವೆ.

ಮುಂದಿನ ಕೆಲವು ಪುಟಗಳಲ್ಲಿ, ನಾವು ಮೊದಲು ತಂತ್ರವನ್ನು ಹೇಗೆ ಪರಿಚಯಿಸುತ್ತೇವೆ ಮತ್ತು ಪುಸ್ತಕವನ್ನು ಅರ್ಥಮಾಡಿಕೊಳ್ಳಲು ಅದನ್ನು ಹೇಗೆ ಅನ್ವಯಿಸುತ್ತೇವೆ ಎಂಬುದನ್ನು ನೋಡಿ, ನಾವು ಚಿತ್ರ ಪುಸ್ತಕ *ಕ್ಯಾಚ್ ದಟ್ ಕ್ಯಾಟ್*!ಅನ್ನು ಬಳಸುತ್ತಿರುವಾಗ, ಕಥೆಯಲ್ಲಿನ ಪಾತ್ರಗಳು, ಕಾರ್ಯಗಳು ಮತ್ತು ಘಟನೆಗಳನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಲು ಪಠ್ಯದಲ್ಲಿನ“ ಸುಳಿವುಗಳು ”ಮತ್ತು ವಿವರಣೆಗಳನ್ನು ಜಾಗರೂಕತೆಯಿಂದ ಗಮನಿಸಿ ಎಂದು ವಿದ್ಯಾರ್ಥಿಗಳನ್ನು ಎಚ್ಚರಿಸುತ್ತೇವೆ.

[3] Tulika, 2013. Written by Tharini Viswanath and illustrated by Nancy Raj

## ***ತರಗತಿ ಪಾಠವನ್ನು ಪರಿಚಯಿಸುವುದು***

ಇಂದು, ನಾನು ನಿಮಗಾಗಿ ಒಂದು ಕಥೆಯನ್ನು ರೀಡ್ ಅಲೌಡ್(ಗಟ್ಟಿಯಾಗಿ ಓದುವುದು) ಮಾಡುತ್ತೇನೆ . ಈ ಕತೆಯ ಹೆಸರು ಕ್ಯಾಚ್ ದಟ್ ಕ್ಯಾಟ್ ! ನಾನು ಓದುತ್ತಿರುವಾಗ ಕೆಲವು ಸ್ಥಳಗಳಲ್ಲಿ ನಿಲ್ಲಿಸುತ್ತೇನೆ ಮತ್ತು ನಾನು ಏನು ಯೋಚಿಸುತ್ತಿದ್ದೇನೆ ಎಂದು ಹೇಳುತ್ತೇನೆ. ಈ ರೀತಿಯಾಗಿ, ನಾನು ಕಥೆಯನ್ನು ಹೇಗೆ ಅರ್ಥೈಸಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ ಎಂದು ನೀವು ನೋಡಬಹುದು. ಕಥೆಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ನನಗೆ ಈಗಾಗಲೇ ತಿಳಿದಿರುವ ಸಂಗತಿಗಳೊಂದಿಗೆ ಪದಗಳು ಮತ್ತು ಚಿತ್ರಗಳನ್ನು ಹೇಗೆ ಹೊಂದಿಸಿಕೊಳ್ಳುತ್ತೇನೆ ಎಂಬುದನ್ನು ಗಮನಿಸಿ. ಇದನ್ನು "ಅನುಮಾನಿಸುವುದು" (ಇನ್ಫ್ಾರೆನ್ಸ್ ) ಎಂದು ಕರೆಯಲಾಗುತ್ತದೆ ಸರಿಯೇ?

ಕೆಲವೊಮ್ಮೆ, ಲೇಖಕರು ಕಥೆಯಲ್ಲಿನ ಎಲ್ಲಾ ವಿವರಗಳನ್ನು ನಮಗೆ ನೀಡುವುದಿಲ್ಲ.ಆದರೆ ಪದಗಳು ಮತ್ತು ಚಿತ್ರಗಳಲ್ಲಿ ಅವರು ನಮಗಾಗಿ ನೀಡುವ "ಸುಳಿವು"ಗಳತ್ತ ಗಮನ ಹರಿಸುವ ಮೂಲಕ ಕೆಲವನ್ನು ನಾವು ಊಹಿಸಬಹುದು. ಇದು ಅನುಮಾನವಾಗಿದೆ (ಇನ್ಫ್ಾರೆನ್ಸ್), ಇಲ್ಲಿ ಕಥೆಯಲ್ಲಿ ಹೇಳದ ವಿಷಯಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಾಗುತ್ತದೆ.

ಕಥೆಯಲ್ಲಿ ಏನು ನಡೆಯುತ್ತಿದೆ ಎಂದು ನಿಮಗೆ ಸಂಪೂರ್ಣವಾಗಿ ಅರ್ಥವಾಗದಿದ್ದಾಗ, ಅಂದರೆ ನೀವು ಗೊಂದಲಕ್ಕೊಳಗಾದಾಗ ಊಹಿಸುವುದು, ಅನುಮಾನಿಸುವುದು (ಇನ್ಫ್ಾರೆನ್ಸ್), ಸಹಾಯಕವಾಗುತ್ತದೆ. ಕಥೆಯಲ್ಲಿನ ಒಂದು ಪಾತ್ರದ ಭಾವನೆ ಅಥವಾ ಆಲೋಚನೆ ಏನು? ಅವಳು ಹೇಗೆ ವರ್ತಿಸುತ್ತಾಳೆ? ಅವಳು ಯಾವ ರೀತಿಯ ವ್ಯಕ್ತಿ? ಪಾತ್ರಗಳು ಪರಸ್ಪರ ಹೇಗೆ ಸಂಬಂಧ ಹೊಂದಿವೆ? ಹೀಗೆ ಮುಂತಾದವು . ಕಥೆಯಲ್ಲಿ ನಿಜವಾಗಿಯೂ ಏನಾಗುತ್ತಿದೆ ಎಂದು ನಿಮಗೆ ಅಚ್ಚರಿಯಾದಲ್ಲಿ, ವಿಚಿತ್ರವೆನಿಸಿದಲ್ಲಿ ಓದುವುದನ್ನು ಸ್ವಲ್ಪ ನಿಲ್ಲಿಸಿ, ಮತ್ತೆ ಓದಿ ಮತ್ತು ಏನು ನಡೆಯುತ್ತಿದೆ ಎಂಬುದನ್ನು 'ಊಹಿಸಲು' ಪ್ರಯತ್ನಿಸಿ. ಇಂದು ನಾನು ಅದನ್ನು ಹೇಗೆ ಮಾಡುತ್ತೇನೆ ಎಂದು ನೀವೇ ನೋಡಿ. ಸರಿ, ನಾವು ಪ್ರಾರಂಭಿಸೋಣವೇ?

ಶಿಕ್ಷಕರು ಮಕ್ಕಳ ಸ್ನೇಹಿ ರೀತಿಯಲ್ಲಿ ತಂತ್ರವನ್ನು ಪರಿಚಯಿಸುತ್ತಾರೆ

ಯಾವಾಗ ಬಳಸಬೇಕೆಂದು ಶಿಕ್ಷಕರು ವಿವರಿಸುತ್ತಾರೆ ಟೀಚರ್ ವಿವರಿಸುತ್ತಾರೆ

ಈ ಅಧಿವೇಶನದಲ್ಲಿ ಏನು ಮಾಡಬೇಕು ಎಂದು ಟೀಚರ್ ವಿವರಿಸುತ್ತಾರೆ

| **ಪುಸ್ತಕದಿಂದ ಆಯ್ದ ಪಠ್ಯ** | **ಶಿಕ್ಷಕರಿಂದ ಥಿಂಕ್ ಅಲೌಡ್ ಅಥವಾ ಗಟ್ಟಿಯಾಗಿ ಓದುವುದು** | **ಓದುಗರಿಗಾಗಿ ಟಿಪ್ಪಣಿ** |
|---|---|---|
| ಡಿಪ್ ಡಿಪ್ ಶಾಲೆಯಲ್ಲಿ ಅತ್ಯಂತ ಚಿಕ್ಕ ಮಗು... ಅವಳು ಕಾರಿಡಾರ್‌ಗಳಲ್ಲಿ ಶಿಳ್ಳೆ ಹಾಕಿದಳು, ಕಿಟಕಿಯಿಂದ ಮೂಲಕ ಕೋತಿಗಳನ್ನು ಆಟವಾಡಿಸಿದಳು. ವಿರಾಮದ ಸಮಯದಲ್ಲಿ ಊಟದ ವಿಷಯದಲ್ಲಿ ಜಗಳ ಪ್ರಾರಂಭಿಸಿದಳು.<br><br>ಚಿಂತಿಸಬೇಡ, ಮೀಮೊ." ಡಿಪ್ ಡಿಪ್<br>ಹೇಳಿದಳು . "ನೀನು ಶಾಲೆಗೆ ಹೋಗು. ನಾನು ಕಾಪಿ [ಬೆಕ್ಕು] ಯನ್ನು ನೋಡಿಕೊಳ್ಳುತ್ತೇನೆ<br>. | ಹ್ಮ್... ಈ ಪದಗಳು ಡಿಪ್ ಡಿಪ್ ಓರ್ವ ತುಂಟ, ವಿನೋದ ಪ್ರಿಯ ಹುಡುಗಿ ಎಂದು ನನಗೆ ಹೇಳುತ್ತವೆ. ಆದರೆ ಸ್ವಲ್ಪ ನಿಲ್ಲಿ! ಈ ಚಿತ್ರಗಳಲ್ಲಿ (ಚಿತ್ರ *3* ನೋಡಿ), ಅವಳು ಗಾಲಿಕುರ್ಚಿಯಲ್ಲಿದ್ದಾಳೆ. ಕವರ್ ಪೇಜ್‌ನಲ್ಲೂ ಗಾಲಿಕುರ್ಚಿ ಇತ್ತು. ಆದ್ದರಿಂದ, ಅವಳಿಗೆ ನಡೆಯಲು ಸಾಧ್ಯವಾಗದಿದ್ದರೂ, ಅವಳು ಶಾಲೆಗೆ ಹೋಗುತ್ತಾಳೆ ಮತ್ತು ಸಾಕಷ್ಟು ಸಂತೋಷದಿಂದಿದ್ದಾಳೆ. ನನಗೆ ತಿಳಿದಿರುವ ಅನೇಕ ಕಥೆಗಳು ಮತ್ತು ಚಲನಚಿತ್ರಗಳಲ್ಲಿ, ಡಿಪ್ ಡಿಪ್ ನಂತಹ ಮಕ್ಕಳು ತುಂಬಾ ದುಃಖಿತರಾಗಿದ್ದರು ಮತ್ತು ಶಾಲೆಗೆ ಹೋಗುತ್ತಿರಲಿಲ್ಲ, ಆದರೆ ಡಿಪ್ ಡಿಪ್ ನಮ್ಮಲ್ಲಿ ಒಬ್ಬಳಂತೆ ಕಾಣುತ್ತಾಳೆ . ಅದೋ ನೋಡಿ ಅವಳು ನೂಡಲ್ಸ್ ಜೊತೆ ಆಟವಾಡುತ್ತಿದ್ದಾಳೆ! ನಾನು ಈಗಾಗಲೇ ಅವಳನ್ನು ಇಷ್ಟಪಟ್ಟಿದ್ದೇನೆ!<br><br>*ಡಿಪ್ ಡಿಪ್ ತುಂಬಾ ಸಹಾಯಕ ಮನೋಭಾವದವಳಾಗಿದ್ದಾಳೆ ಎಂದು ಲೇಖಕರು ಹೇಳುತ್ತಿದ್ದಾರೆ ಆದರೆ ಶಾಲೆಗೆ ಗೈರಾಗಿ ಸ್ನೇಹಿತನ ಬೆಕ್ಕನ್ನು ನೋಡಿಕೊಳ್ಳುವಷ್ಟು! ವಾಹ್, ಇಂತಹ ಸಹಾಯವನ್ನು ನಾನು ನನ್ನ ಉತ್ತಮ ಸ್ನೇಹಿತನಿಗೆ ಮಾತ್ರ ಮಾಡಬಲ್ಲೆ. ಮೀಮೊ ಮತ್ತು ಡಿಪ್ ಡಿಪ್ ತುಂಬಾ ಆಪ್ತ ಸ್ನೇಹಿತರು ಎಂಬ ಸುಳಿವು ನಮಗೆ ಇಲ್ಲಿ* | ಡಿಪ್ ಡಿಪ್ ದೈಹಿಕ ಅಂಗವೈಕಲ್ಯವನ್ನು ಹೊಂದಿದ್ದಾಳೆ ಎಂದು ಲೇಖಕ ಹೇಳುವುದಿಲ್ಲ. ಆದರೆ ಓದುಗರು ಚಿತ್ರಗಳಿಂದ ಹಾಗೆ ಊಹಿಸಬಹುದಾದ ವಿಷಯವಾಗಿದೆ. ಅವಳ ಪಾತ್ರವನ್ನು, ವ್ಯಕ್ತಿತ್ವವನ್ನು (ಮತ್ತು ಕಥೆಯನ್ನು!) ಪ್ರಶಂಸಿಸಲು ಈ ವಿವರಗಳು ಬಹಳ ಮುಖ್ಯವಾಗಿದೆ.<br><br>ಇದು ಎರಡು ಪಾತ್ರಗಳ ನಡುವಿನ ಸಂಬಂಧದ ಕುರಿತಾದ ಅನುಮಾನ ಅಥವಾ ಊಹೆಯಾಗಿದೆ. ಹೀಗೆ ಊಹಿಸಲು ಶಿಕ್ಷಕರು ತಮ್ಮ ಮತ್ತುಪಠ್ಯದ ನಡುವೆ ಸಂಬಂಧ ಏರ್ಪಡಿಸಿಕೊಳ್ಳುತ್ತಿದ್ದಾರೆ .<br><br>ಶಿಕ್ಷಕರು ಕೂಡ ಡಿಪ್ ಡಿಪ್ ಕಥೆಯಲ್ಲಿ ಅವಳ ವ್ಯಕ್ತಿತ್ವ ಮತ್ತು ಪಾತ್ರ ದ ಬಗ್ಗೆ ಹಲವಾರು ಸುಳಿವುಗಳ ಕೊಟ್ಟು<br>ಗಮನ ಸೆಳೆಯುತ್ತಾರೆ |

| | | |
|---|---|---|
| ಅವನು [ಡಿಪ್ ಡಿಪ್ ಸಹೋದರ] ಶಾಲಾ ಬಸ್‌ಗಾಗಿ ಕಾಯಲು ಅವಳನ್ನು ಅಲ್ಲಿಯೇ ಬಿಟ್ಟು ತನ್ನ ಶಾಲೆಗೆ ಹೊರಟನು. ಅವನು ಹೋದ ತಕ್ಷಣ, ಡಿಪ್ ಡಿಪ್ ಓಡಿಹೋದಳು … | ಅವಳು ತನ್ನ ಸಹೋದರ ಹೊರಡುವವರೆಗೂ ಕಾಯುತ್ತಿದ್ದಳು. ತಾನು ಶಾಲೆಗೆ ಗೈರಾಗುವುದು ತನ್ನ ಸಹೋದರನಿಗೆ ತಿಳಿಯಬಾರದೆಂದು ಅವಳು ಬಯಸುತ್ತಿದ್ದಾಳೆ ಎಂಬ ಅಂಶವನ್ನು ಇದು ನನಗೆ ಹೇಳುತ್ತದೆ. ಬಹುಶಃ ಅವನು ಶಾಲೆಗೆ ಗೈರಾಗಲು ಅಥವಾ ಬೆಕ್ಕನ್ನು ನೋಡಿಕೊಳ್ಳಲು ಅನುಮತಿಸುವುದಿಲ್ಲ ಎಂದು ಅವಳು ಭಾವಿಸುತ್ತಾಳೆ. ಅವಳು ಎಲ್ಲಿದ್ದಾಳೆಂದು ಅವಳ ಸಹೋದರ ಅಥವಾ ಇತರ ಕುಟುಂಬ ಸದಸ್ಯರಿಗೆ ತಿಳಿದಿಲ್ಲದ ಸುಳಿವು ಇದು! ಆದ್ದರಿಂದ ಸ್ವತಃ ಈ ರೀತಿಯ ಸಾಹಸ ಮಾಡಲು ಅವಳಿಗೆ ಧೈರ್ಯವಿದೆ. | ಇದು ಕಥಾವಸ್ತುವಿನ / ಸನ್ನಿವೇಶದ ಬಗ್ಗೆ ಒಂದು ಅನುಮಾನ ಅಥವಾ ಊಹಾಕಲ್ಪನೆಯಾಗಿದೆ – ಕಥೆಗೆ ಒಂದು ಸಾಹಸಮಯವಾದ ರಂಗನ್ನು ನೀಡುತ್ತದೆ. |

| | | |
|---|---|---|
| ಬೆಟ್ಟದಿಂದ ಕೆಳಗೆ ಬೆಕ್ಕಿನ ಹಿಂದೆ ಅವಳು ಉರುಳಿದಳು . ದೇವರ ದಯೆಯಿಂದ ತಾನು ಗಾಲಿ ಚಕ್ರ ಹೊಂದಿದ್ದೇನೆಂದು ಅವಳು ಯೋಚಿಸಿದಳು. ಅದು ಓಟಕ್ಕಿಂತ ವೇಗವಾಗಿರುತ್ತದೆ . ಓಟದಲ್ಲಿ ಅವಳು ಯಾವಾಗಲೂ ತನ್ನ ಸ್ನೇಹಿತರನ್ನು ಸುಲಭವಾಗಿ ಸೋಲಿಸಬಲ್ಲಳು! | *ತನ್ನ ಪರಿಸ್ಥಿತಿಯ ಬಗ್ಗೆ ಡಿಪ್ ಡಿಪ್ ತುಂಬಾ ಸಕಾರಾತ್ಮಕವಾಗಿರುವುದನ್ನು ನಾನು ಇಷ್ಟಪಡುತ್ತೇನೆ! ತನ್ನ ಗಾಲಿಕುರ್ಚಿಯಿಂದಾಗಿ ಅವಳು ಇತರರಿಗಿಂತ ವೇಗವಾಗಿ ತಿರುಗಾಡುವುದನ್ನು ಸಂತೋಷಪಡುತ್ತಾಳೆ.* | ಇಲ್ಲಿ, ಶಿಕ್ಷಕರು ಪಾತ್ರದ ಕುರಿತು ಊಹಿಸಿದ್ದಾರೆ. |

| | | |
|---|---|---|
| ಅವಳು ತನ್ನ ಊಟದ ಡಬ್ಬಿ ತೆರೆದು ನೋಡಿದಳು… “ಮೀನಿನ ಕರಿ! ಇದು ಕಾಪಿಯನ್ನು ಕೆಳಗಿಳಿಸು ತ್ತದೆ … ” | *ಮೀನಿನ ಕರಿ ಗೋಸ್ಕರ ಕಾಪಿ ಏಕೆ ಬರಬೇಕು? ಓಹ್, ಈಗ ಅರ್ಥವಾಯಿತು! ಬೆಕ್ಕುಗಳು ಸಾಮಾನ್ಯವಾಗಿ ಮೀನುಗಳನ್ನು ಇಷ್ಟಪಡುವ ಕಾರಣ, ಕಾಪಿಗೂ ಸಹ ಇಷ್ಟವಿರಬೇಕು ಎಂದು ಡಿಪ್ ಡಿಪ್ ಭಾವಿಸುತ್ತಾಳೆ. ಮರದಿಂದ ಬೆಕ್ಕನ್ನು ಕೆಳಗಿಳಿಸಲು ಇದೊಂದು ಉತ್ತಮ ಮಾರ್ಗ.* | ಕಾಪಿಗೆ ಮೀನು ಇಷ್ಟವಾಗುತ್ತದೆ ಎಂದು ಕಥೆಯಲ್ಲಿ ಉಲ್ಲೇಖಿಸಿಲ್ಲ. ಡಿಪ್ ಡಿಪ್ ತಾರ್ಕಿಕತೆಯನ್ನು ಅರ್ಥಮಾಡಿಕೊಳ್ಳಲು ಓದುಗರು ಬೆಕ್ಕುಗಳ ಬಗ್ಗೆ ತಮ್ಮ ಜ್ಞಾನವನ್ನು ಹೊಂದಿರಬೇಕಾಗುತ್ತದೆ. |
| ಆಯ್ತು!" ಡಿಪ್ ಡಿಪ್ ಹೇಳಿದಳು . "ನಾನು ಬರುತ್ತಿದ್ದೇನೆ. ಚಲಿಸಬೇಡಿ! ” ಅವಳ ಮುಖದ ಮೇಲೆ ಕೋಪವಿದೆ ಮತ್ತು ಅವಳ ನಾಲಿಗೆ ಹೊರಗೆ ಚಾಚಿದೆ ಮತ್ತು, ಡಿಪ್ ಡಿಪ್ ಗಾಲಿ ಖುರ್ಚಿಯ ಸಹಾಯದಿಂದ ಮರದ ಹತ್ತಿರ ಬರುತ್ತಾಳೆ … | *ಮುಂಚಿನ ಕಥೆಯಲ್ಲಿ, ತೀವ್ರವಾಗಿ ಯೋಚಿಸುವಾಗಲೆಲ್ಲಾ ಡಿಪ್ ಡಿಪ್ ತನ್ನ ನಾಲಿಗೆಯನ್ನು ಹೊರಹಾಕುತ್ತಾಳೆ ಎಂದು ಲೇಖಕರು ಉಲ್ಲೇಖಿಸುತ್ತಾರೆ. ಆದ್ದರಿಂದ ಇಲ್ಲಿ ಅವಳು ಮರವನ್ನೇರಿ ಕಾಪಿಯನ್ನು ತಲುಪಲು ಉತ್ತಮ ಮಾರ್ಗ ಯಾವುದೆಂದು ತೀವ್ರವಾಗಿ ಯೋಚಿಸುತ್ತಿರಬೇಕು.* | ಈ ಅನುಮಾನವು ಕಥೆಯಲ್ಲಿನ ಹಿಂದಿನ ಮಾಹಿತಿಯನ್ನು ಪ್ರಸ್ತುತ ಸನ್ನಿವೇಶಕ್ಕೆ ಅನ್ವಯಿಸುವುದನ್ನು ಒಳಗೊಂಡಿರುತ್ತದೆ. |
| ಡಿಪ್ ಡಿಪ್ ಮರದ ಕೆಳಗೆ ಧ್ವನಿಗಳನ್ನು ಕೇಳಿದಾಗ . “ಅಲ್ಲಿ ಅವಳು ಆ ಮರದ ಮೇಲೆ ಇದ್ದಾಳೆ!”… ಅವಳ ತಂದೆ ಅವಳನ್ನು ಕೆಳಕ್ಕೆ ಇಳಿಸಿದರು. ಎಲ್ಲರೂ ಗದರಿಸಿ ನಗುತ್ತಾ ಅವಳನ್ನು ತಬ್ಬಿಕೊಂಡರು. | *ಈ ಮೊದಲು, ಅವಳ ಕುಟುಂಬದಲ್ಲಿ ಯಾರಿಗೂ ಅವಳು ಎಲ್ಲಿದ್ದಾಳೆಂದು ತಿಳಿದಿಲ್ಲ ಎಂದು ನಾನು ಊಹಿಸಿದ್ದೇನೆ, ನೆನಪಿದೆಯೇ? ಅವಳು ಹಿಂತಿರುಗದಿದ್ದಾಗ ಅವರು ಚಿಂತೆಗೀಡಾಗಿರಬೇಕು ಮತ್ತು ಅವಳನ್ನು ಹುಡುಕಲು ಪ್ರಾರಂಭಿಸಿರಬೇಕು. ಅದಕ್ಕಾಗಿಯೇ ಡಿಪ್ ಡಿಪ್ ಕುಟುಂಬವು ಅವಳನ್ನು ಸುರಕ್ಷಿತವಾಗಿರುವುದನ್ನು ನೋಡಿ ಸಂತೋಷವಾಗಿದ್ದರೂ ಅವಳನ್ನು ಗದರಿಸಿರಬೇಕು. ನಾನು ಚಿಕ್ಕವನಾಗಿದ್ದಾಗ ಮತ್ತು ಹೂವಿನ ಮಾರುಕಟ್ಟೆಯಲ್ಲಿ ಕಳೆದುಹೋದಾಗ, ನನ್ನ ಪೋಷಕರು ಅದೇ ಕೆಲಸವನ್ನು ಮಾಡಿದರು.* | ಇಲ್ಲಿ, ಶಿಕ್ಷಕರು ಕುಟುಂಬದ ಪ್ರತಿಕ್ರಿಯೆಯನ್ನು ಅರ್ಥಮಾಡಿಸಲು ಹಿಂದಿನ ಅನುಮಾನ ಮತ್ತು ಪಠ್ಯದೊಂದಿಗೆ ಸ್ವಂತದ ಅನುಭವದ ಸಂಪರ್ಕವನ್ನು ಬೆಸೆದಿದ್ದಾರೆ. |

## ಕಥೆಯ ಸಾರಾಂಶ

*ಸರಿ, ಕಥೆಯನ್ನು ಅರ್ಥಮಾಡಿಕೊಳ್ಳಲು ನಾನು ಹೇಗೆ ಮಧ್ಯೆ ಮಧ್ಯೆ ಕಥೆಯನ್ನು ನಿಲ್ಲಿಸುತ್ತಾ ಊಹೆ ಮಾಡುತ್ತಾ ಮುಂದುವರಿದೆ ಎಂದು ನೀವು ನೋಡಿದಿರಾ? ನಾನು ಪುಸ್ತಕದಲ್ಲಿನ ಸುಳಿವುಗಳನ್ನು, ಅಂದರೆ ಪದಗಳು, ವಾಕ್ಯಗಳು ಮತ್ತು ಚಿತ್ರಗಳನ್ನು ಬಳಸಿ ಲೇಖಕನು ನೇರವಾಗಿ ಉಲ್ಲೇಖಿಸದ ವಿಷಯಗಳನ್ನು ಅರ್ಥಮಾಡಿಕೊಳ್ಳಲು ನಾನು ಈಗಾಗಲೇ ತಿಳಿದಿರುವ ಸಂಗತಿಗಳೊಂದಿಗೆ ಅವುಗಳನ್ನು ಸಂಪರ್ಕಿಸಿದೆ. ಉದಾಹರಣೆಗೆ, ಡಿಪ್ ಡಿಪ್ ತಿರುಗಾಡಲು ಗಾಲಿಕುರ್ಚಿಯನ್ನು ಬಳಸುವುದಿರಬಹುದು ಅಥವಾ ಅವಳು ಮತ್ತು ಮೀಮೊ ಉತ್ತಮ ಸ್ನೇಹಿತರಾಗಿದ್ದರು ಎಂಬುದಿರಬಹುದು. ಹೀಗೆ ಮಾಡಿದ್ದರಿಂದ ನಿಮಗೆ ಗ್ರಹಿಸಲಾಗದ ವಿಷಯಗಳನ್ನು ಗ್ರಹಿಸಲು ಸಹಾಯವಾಯಿತು ಎಂದು ನೀವು ಭಾವಿಸುತ್ತೀರಾ? ಇದು ಕಥೆಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಅದು ನಿಮಗೆ ಸಹಾಯ ಮಾಡಿದೆಯೇ?*

*ನಾನು ಸಹ ಈಗ ಡಿಪ್ ಡಿಪ್ ಅನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದೇನೆ ಎಂದು ಭಾವಿಸುತ್ತೇನೆ. ಅವಳು ಕಥೆಯಲ್ಲಿ ಹೇಳುವ ಮಾತುಗಳಿಂದ, ಮಾಡುವ ಕೆಲಸಗಳಿಂದ ಅವಳು ತುಂಬಾ ಚಾಣಾಕ್ಷೆ, ಧೈರ್ಯಶಾಲಿ ಮತ್ತು ಸ್ವತಂತ್ರಳು ಎಂದು ನಾನು ಊಹಿಸಿದೆ. ಅವಳು ತುಂಬಾ ಸಕಾರಾತ್ಮಕವಾಗಿ ಯೋಚಿಸುವವಳು ಮತ್ತು ಉತ್ತಮ ಸ್ನೇಹಿತೆ! ಡಿಪ್ ಡಿಪ್ ಅನ್ನು ಈ ರೀತಿ ಅರ್ಥಮಾಡಿಕೊಳ್ಳುವುದರಿಂದ ಲೇಖಕರು ಬಹುಶಃ ನಮಗೆ ಹೇಳಲು ಪ್ರಯತ್ನಿಸುತ್ತಿರುವುದನ್ನು ತಿಳಿಯಲು ಸಹಾಯವಾಗುತ್ತದೆ - ವಿಕಲಾಂಗ ಮಕ್ಕಳು ಇತರ ಮಕ್ಕಳಂತೆಯೇ ಇರುತ್ತಾರೆ - ಅವರು ಬೇರೆ ಮಕ್ಕಳಂತೆಯೇ, ಅನ್ವೇಷಿಸಲು, ಇತರರಿಗೆ ಸಹಾಯ ಮಾಡಲು ಮತ್ತು ವಿನೋದವನ್ನು ಹೊಂದಲು ಬಯಸುತ್ತಾರೆ !*

ಮುಂದಿನ ತರಗತಿಯಲ್ಲಿ ನಾವು ಒಟ್ಟಿಗೆ ಓದಿದ ಕಥೆಪುಸ್ತಕದಲ್ಲಿ ಈ ರೀತಿ ಅನುಮಾನಗಳನ್ನು ಮಾಡಲು ಪ್ರಯತ್ನಿಸೋಣ, ಸರಿನಾ ?

ಶಿಕ್ಷಕರು ಅವಳು ಏನು ಮಾಡಿದ್ದಾಳೆಂದು ಸಾರಾಂಶಿಸುತ್ತಾರೆ, ವಿದ್ಯಾರ್ಥಿಗಳಿಂದ ಅನಿಸಿಕೆಗಳನ್ನು ಆಹ್ವಾನಿಸುತ್ತಾರೆ ಮತ್ತು

ತಂತ್ರವನ್ನು ಅನ್ವಯಿಸಲು ಅವರನ್ನು ಪ್ರೋತ್ಸಾಹಿಸುತ್ತಾರೆ

**ಥಿಂಕ್-ಅಲೋಡ್ಸ್ ನಂತರ ಅಭ್ಯಾಸ ಮಾಡಿ**

ಜಿ ಆರ್ ಆರ್ ಮಾದರಿ ನೆನಪಿದೆಯೇ? ಗ್ರಹಿಸುವ ಕಾರ್ಯತಂತ್ರವಾದ ಥಿಂಕ್ ಅಲೌಡ್ ಒಂದು ಪ್ರಮುಖ ಮೊದಲ ಹೆಜ್ಜೆಯಾಗಿದೆ, ಆದರೆ ಅದೊಂದರಿಂದಲೇ ಪ್ರಯೋಜನವಾಗದು !ನಿಮ್ಮ ವಿದ್ಯಾರ್ಥಿಗಳಿಗೆ ಈ ಕಾರ್ಯತಂತ್ರವನ್ನು ಬಳಸಲು ಸಹಕಾರ, ಮಾರ್ಗದರ್ಶನ ಮತ್ತು ಅಭ್ಯಾಸದ ಅವಕಾಶಗಳನ್ನು ನೀಡಿ .ಕೆಲವು ಉದಾಹರಣೆಗಳು:

- ನೀವು ಒಟ್ಟಿಗೆ ಪುಸ್ತಕವನ್ನು ಓದುವಾಗ ನೀವು ತಂತ್ರವನ್ನು ಅನ್ವಯಿಸಿದಂತೆ ನಿಮ್ಮೊಂದಿಗೆ ವಿದ್ಯಾರ್ಥಿಗಳನ್ನು ಸಹ ತಂತ್ರವನ್ನು ಅನ್ವಯಿಸಲು ಆಹ್ವಾನಿಸಿ.
- ಸ್ವಂತವಾಗಿ ಓದಿ ಬರೆಯಬಲ್ಲ ಹಿರಿಯ ವಿದ್ಯಾರ್ಥಿಗಳಿಗೆ ತಮ್ಮ ಪ್ರಶ್ನೆಗಳು, ಅನುಮಾನಗಳು, ಪುಸ್ತಕ / ಪಠ್ಯದಲ್ಲಿನ ಮುನ್ಸೂಚನೆಗಳನ್ನು ಪೋಸ್ಟ್-ಇಟ್ಸ್ ಮಾಡಲು ಅಥವಾ ನೋಟ್‌ಬುಕ್‌ಗಳಲ್ಲಿ ದಾಖಲಿಸಲು ಸೂಚಿಸಿ.
- ತಂತ್ರದ ಬಳಕೆಯನ್ನು ಉತ್ತೇಜಿಸಲು ನಿರ್ದಿಷ್ಟ ಫಾರ್ಮ್ಯಾಟ್ / ಆರ್ಗನೈಸರ್‌ಗಳನ್ನು ಬಳಸಿ. ಇನ್ಫರೆನ್ಸಿಂಗ್‌ಗಾಗಿ ಅಥವಾ ಊಹಾ ಚಟುವಟಿಕೆಗಾಗಿ ***ಇದು ಹೇಳುತ್ತದೆ– ನಾನು ಹೇಳುತ್ತೇನೆ*** ಚಿತ್ರ 4 ನೋಡಿ (ಬೀರ್ಸ್, 2003)

ವಿದ್ಯಾರ್ಥಿಗಳಿಗೆ ತಮ್ಮದೇ ಆದ ಸಾಮರ್ಥ್ಯವನ್ನು ಉಪಯೋಗಿಸಿ ಥಿಂಕ್ ಅಲೌಡ್ ಮಾಡಲು ಅನುಮತಿಸಿ; ಅಗತ್ಯ ಬಿದ್ದಾಗ ಮಾತ್ರ ಮಧ್ಯಪ್ರವೇಶಿಸಿ ಮತ್ತು ಸಹಾಯ ಮಾಡಿ . ವಿದ್ಯಾರ್ಥಿಗಳ ಅಗತ್ಯತೆಗಳಂತೆ ಮಾಡೆಲಿಂಗ್ ಅನ್ನು ಮುಂದುವರಿಸಿ ಅವರಿಗೆ ತಂತ್ರದೊಂದಿಗೆ ಅಥವಾ ಪಠ್ಯದ ಪ್ರಕಾರ ಅಥವಾ ಮಟ್ಟವು ಬದಲಾದಾಗ ಹೆಚ್ಚಿನ ಸಹಾಯ ಬೇಕಾಗುತ್ತದೆ. ಅಂತಿಮವಾಗಿ, ವಿದ್ಯಾರ್ಥಿಗಳು ತಮ್ಮದೇ ಆದ ಓದುವಿಕೆಯನ್ನು ಮುಂದುವರಿಸುವಾಗ ತಂತ್ರವನ್ನು ಸ್ವತಂತ್ರವಾಗಿ ಬಳಸಲು ಪ್ರೋತ್ಸಾಹಿಸಿ.

ಚಿತ್ರ 4. ಇದು ಹೇಳುತ್ತದೆ – ನಾನು ಹೇಳುತ್ತೇನೆ ಉದಾಹರಣೆಯ ಚಾರ್ಟ್) ಬಿಯರ್ಸ್, 2003, ಪುಟಗಳು 166-167)

| **ಪ್ರಶ್ನೆ** | **ಇದು ಹೇಳುತ್ತದೆ ...** | **ನಾನು ಹೇಳುತ್ತೇನೆ.** | **ಮತ್ತೆ...** |
|---|---|---|---|
| ಹಂತ 1… ಪ್ರಶ್ನೆಯನ್ನು ಬರೆಯಿರಿ (ರಚಿಸಲಾದ ಅಥವಾ ಒದಗಿಸಲಾಗಿದ) | ಹಂತ 2…ಪ್ರಶ್ನೆಗೆ ಉತ್ತರಿಸಲು ಸಹಾಯ ಮಾಡುವ ಮಾಹಿತಿಯನ್ನು ಪಠ್ಯದಿಂದ ಹುಡುಕಿ | ಹಂತ 3… ಆ ಮಾಹಿತಿಯ ಬಗ್ಗೆ ನಿಮಗೆ ತಿಳಿದಿರುವುದನ್ನು ಯೋಚಿಸಿ . | ಹಂತ 4… ಉತ್ತರಿಸಲು ತಿಳಿದಿರುವ ವಿಷಯದೊ ಪಠ್ಯವು ಏನು ಎಂಬುದನ್ನು ಸಂಯೋಜಿಸಿ |
| ಉದಾಹರಣೆ:ಗೋಲ್ಡಿಲಾಕ್ಸ್, ಕರಡಿ ಮರಿಯ ಕುರ್ಚಿಯನ್ನು ಏಕೆ ಮುರಿದರು? | ಅವಳು ಮಗುವಿನ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾಳೆ ಆದರೆ ಅವಳು ಮಗುವಲ್ಲ ಪ್ರಾಯದ ಹುಡುಗಿ ಎಂದು ಅದು ಹೇಳುತ್ತದೆ.. | ಮಗುವಿನ ಕುರ್ಚಿಗಳು ತುಂಬಾ ದೊಡ್ಡದಾಗಿರುವುದಿಲ್ಲ . ಅವು ಮಕ್ಕಳಿಗಾಗಿ ಇರುವ ಕುರ್ಚಿಗಳು. ಆದರೆ ಅವಳು ದೊಡ್ಡವಳು, ಆದ್ದರಿಂದ ಅವಳು ಹೆಚ್ಚು ತೂಕವಿರುತ್ತಾಳೆ. | ಆದ್ದರಿಂದ ಅವ ಅದು ಮುರಿಯ |

ತಂತ್ರಗಳನ್ನು ಕಲಿಯಲು ಬಹಳ ಸಮಯ ತೆಗೆದುಕೊಳ್ಳುತ್ತದೆ !
ಮುಂಚಿತವಾಗಿಯೇ ಪ್ರಾರಂಭಿಸಿ ಹೊಸ ತಂತ್ರಗಳನ್ನು ಕಲಿಯಲು, ಕಲಿತದ್ದನ್ನು ಅನ್ವಯಿಸಲು ಮತ್ತು ಈ ಹಿಂದೆ ಕಲಿತಿದ್ದನ್ನು ಪರಿಷ್ಕರಿಸಿಕೊಳ್ಳಲು ಪ್ರಾಥಮಿಕ ಶಾಲಾ ಹಂತದುದ್ದಕ್ಕೂ ಮಕ್ಕಳಿಗೆ ಎಷ್ಟು ಸಾಧ್ಯವೋ ಅಷ್ಟು ಅವಕಾಶಗಳನ್ನು ನೀಡುವುದು ಬಹಳ ಮುಖ್ಯ.

**References**

Beers, K. (2003). *When kids can't read, what teachers can do: A guide for teachers, 6-12*. Portsmouth, NH: Heinemann.

Menon, S., Krishnamurthy, R., Sajitha, S., Apte, N., Basargekar, A., Subramaniam, S., Nalkamani, M., & Modugala, M. (2017). *Literacy Research in Indian Languages (LiRIL): Report of a three-year longitudinal study on early reading and writing in Marathi and Kannada*. Bangalore: Azim Premji University and New Delhi: Tata Trusts.

Pressley, M. (2001). Comprehension instruction: What makes sense now, what might make sense soon. *Reading Online*, *5*(2), pp. 1-14.

Sah, S. (2009). *Reading Hindi literature in elementary school context*. Unpublished M.Phil Dissertation, University of Delhi, Delhi.

Sinha, S. (2018). *Reading comprehension instruction: Developing engaged readers* [Blog Piece]. Retrieved from http://eli.tiss.edu/reading-comprehension-instruction-developing- engaged-readers/

Wilhelm, J.D. (2001). *Improving comprehension with think-aloud strategies*. New York, NY: Scholastic Professional Books.

**Author:** Akhila Pydah

**Conceptual Support and Editing:** Shailaja Menon

**Copy-editing:** Simrita Takhtar

**Layout & Design:** Harshita V. Das

© 2019 by Early Literacy Initiative, Tata Institute of Social Sciences, Hyderabad.This work is licensed under a Creative Commons Attribution-ShareAlike 4.0 International

License: https://creativecommons.org/licenses/by-sa/4.0/